ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಜಿಲ್ಲಾ ಪಂಚಾಯತ್ (ಕಾರ್ಯಕಲಾಪ) ನಿಯಮಾವಳಿ 16ರ ಪ್ರಕಾರ ಪ್ರತಿಯೊಂದು ಇಂಥ ಖರೀದಿ ಸಾಮಗ್ರಿಗಳನ್ನು ತೆಗೆದುಕೊಳ್ಳಬೇಕಾದರೆ ಖರೀದಿ ಉಪಸಮಿತಿಯ ಮುಂದೆ ಇಂಥವನ್ನು ಪ್ರಸ್ತಾಪ ಮಾಡಬೇಕು. ತೆಗೆದುಕೊಳ್ಳುವಂಥ ಕಾರಣ, ಮತ್ತು ಅಲ್ಲಿರುವಂಥ ನಮ್ಮ ಆಯವ್ಯಯದಲ್ಲಿ ಅದಕ್ಕಾಗಿ ಒದಗಿಸಿರುವಂಥ ಅನುದಾನ ಇದರ ಜೊತೆಗೆ ಅದರ ಅಗತ್ಯತೆ ಇದೆಯೇ ಎನ್ನುವಂಥ ವಿಚಾರಗಳ ಕುರಿತಾಗಿಯೂ ಕೂಡ ಒಂದು ಟಿಪ್ಪಣಿಯನ್ನು ಅವರು ಕೊಡತಕ್ಕಂಥದ್ದೂ ಕೂಡ ಇದೆ. ಇವನ್ನು ನಿಯಮಾವಳಿಗಳಲ್ಲಿ ಸ್ಪಷ್ಟೀಕರಣ ಮಾಡಿದ್ದೇವೆ. ಅರಣ್ಯಾಭಿವೃದ್ಧಿ ಕೈಗಾರಿಕಾ ನಿಗಮದಿಂದಲೇ ಇವನ್ನೆಲ್ಲಾ ಖರೀದಿ ಮಾಡಬೇಕೆಂದು ಈಗ ಮಾನ್ಯ ಸದಸ್ಯರು ಕೊಟ್ಟಿರುವಂಥ ಸಲಹೆ ರೀತಿಯಲ್ಲಿ ಈಗಾಗಲೇ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ. ಆದರೆ ಆ ರೀತಿಯಾದಂಥ ನಮ್ಮ ಸುತ್ತೋಲೆಯ ಮಾರ್ಗಸೂಚಿ ಮತ್ತು ನಿರ್ದೇಶನವನ್ನು ತಪ್ಪಿ ಬೇರೆ ಕಡೆಯಿಂದ ಅಂದರೆ ಖಾಸಗಿಯವರಿಂದ ತೆಗೆದುಕೊಂಡಿರುವಂಥ ಉದಾಹರಣೆಯನ್ನು ನನ್ನ ಗಮನಕ್ಕೆ ತಂದರೆ ಆ ರೀತಿ ತೆಗೆದು ಕೊಂಡಂಥವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆ. ತಮ್ಮ ಮೂಲಕ ಮತ್ತೊಂದು ಸಲ ಅರಿಕೆ ಮಾಡಿಕೊಳ್ಳುತ್ತೇನೆ ಮತ್ತು ಎಲ್ಲಾ ಅಧಿಕಾರಿಗಳು ಕೂಡ ಇಂಥ ವಿಚಾರದಲ್ಲಿ ಜಾಗ್ರತೆವಹಿಸಿ ನಮ್ಮ ಸರ್ಕಾರಿ ಸ್ವಾಮ್ಯದಲ್ಲಿರುವಂಥ ಅಭಿವೃದ್ಧಿ ನಿಗಮದ ಮೂಲಕ ಕಡ್ಡಾಯವಾಗಿ ಖರೀದಿ ಮಾಡಬೇಕೆಂದು ಹೇಳಿ ಎಚ್ಚರಿಕೆಯನ್ನು ಕೊಡುತ್ತೇನೆ ಹಾಗೂ ಮತ್ತೊಂದು ಸಲ ಪುನರುಚ್ಚೀಕರಣದ ಸುತ್ತೋಲೆಯನ್ನು ಕಳುಹಿಸಿಕೊಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ : ಕಳೆದ ಹಲವು ವರ್ಷಗಳಿಂದ ಅರಣ್ಯ ನಿಗಮದಿಂದ ತೆಗೆದುಕೊಳ್ಳಲಿಲ್ಲ ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಪದೇ ಪದೇ ತರುತ್ತಿದ್ದೇನೆ.

ಅಧ್ಯಕ್ಷರು : ತಮ್ಮ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆಂಯ ಈಗಾಗಲೇ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಮತ್ತೆ ವಿವರಣೆ ಏನೂ ಬೇಡ ಅಷ್ಟು ತೃಪ್ತಿದಾಯಕವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲಾ ವಿಚಾರವನ್ನು ಸಮಗ್ರವಾಗಿ ಅವರೇ ಹೇಳಿಬಿಟ್ಟಿದ್ದಾರೆ.

ಶ್ರೀ. ಕೆ. ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೆ, ಆದೇ ಹೇಳುತ್ತಿದ್ದೇನೆ. ಕಳೆದ ಮೂರು ವರ್ಷದಿಂದ ಅರಣ್ಯ ಅಭಿವೃದ್ಧಿ ಕೈಗಾರಿಕಾ ನಿಗಮದಿಂದ ಖರೀದಿ ಮಾಡಲಿಲ್ಲ.

ಅಧ್ಯಕ್ಷರು : ನೀವು ಮಾನ್ಯ ಮಂತ್ರಿಗಳನ್ನು ಅಭಿನಂದಿಸಿ ಯಾವುದಾದರೂ ಆ ತರಹದ ಲಕ್ರಮ ನಡೆದಿದ್ದರೆ ದಯವಿಟ್ಟು ಅವರ ಗಮನಕ್ಕೆ ತನ್ನಿ. ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಕುಂದಾಪುರ ತಾಲ್ಲೂಕಿನ ಶಂಕರ ನಾರಾಯಣ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೊಠಡಿಗಳ ಕೊರತೆ.

226(1645)

ಶ್ರೀ. ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕು ಶಂಕರನಾರಾಯಣ ಪ್ರಥಮ ದರ್ಜೆ ಕಾಲೇಜಿಗೆ ಕೊಠಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿಯೇ ?

ಆ) ಹಾಗಿದ್ದಲ್ಲಿ ಈ ಕೊರತೆಯನ್ನು ನಿವಾರಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಬಿ.ಎ. ಮೊಹಿದ್ದೀನ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಸದರಿ ಕಾಲೇಜಿನ ಕಟ್ಟಡಕ್ಕಾಗಿ ಒಟ್ಟು ರೂ. 33.00ಲಕ್ಷಗಳ ಅಂದಾಜು ವೆಚ್ಚವಿದ್ದು ಲೋಕೋಪಯೋಗಿ ಇಲಾಖೆಯ ವರದಿಯಲ್ಲಿ ತಿಳಿಸಿರುವಂತೆ 1998-99ನೇ ಸಾಲಿಗೆ ನೆಲ ಅಂತಸ್ತಿನ ಒಂದು ಭಾಗದ ಎರಡು ಕ್ಲಾಸ್ ರೂಮು ಮತ್ತು ಇತರೆ ಸೌಲಭ್ಯಗಳ ನಿರ್ಮಾಣವನ್ನು ಮುಗಿಸಿ ಪ್ರಾಂಶುಪಾಲರ ವಶಕ್ಕೆ ವಹಿಸಿರುತ್ತಾರೆ. ಈ ಸಂಬಂಧ ಉಳಿದ ಕೊಠಡಿಗಳ ಕಾಮಗಾರಿಗಾಗಿ 1999-2000ನೇ ಸಾಲಿಗೆ ರೂ. 2.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಕೊಟ್ಟಿರತಕ್ಕಂಥ ಉತ್ತರದಲ್ಲಿ 33ಲಕ್ಷ ರೂ.ಗಳ ಅಂದಾಜುವೆಚ್ಚವನ್ನು ತೋರಿಸಿದ್ದಾರೆ. ಈಗಾಗಲೇ ಎರಡು ಕೊಠಡಿಗಳನ್ನು ಕಟ್ಟಿಯಾಗಿದೆ. ಅದಕ್ಕೆ ಎಷ್ಟು ವೆಚ್ಚ ತಗುಲಿದೆ ಎನ್ನುವುದನ್ನು ತಿಳಿಸಬೇಕು. 1999-2000ನೇ ಇಸವಿಯಲ್ಲಿ ಎರಡು ಲಕ್ಷ ರೂ.ಗಳನ್ನು ಪ್ರಥಮ ದರ್ಜೆ ಕಾಲೇಜಿನ ಕಟ್ಟಡಗಳಿಗಾಗಿ ಇಟ್ಟಿದ್ದಾರೆ. ಆ ಹಣ ಎಷ್ಟು ಕೊಠಡಿಗಳನ್ನು ಕಟ್ಟುವುದಕ್ಕೆ ಸಾಕಾಗುತ್ತದೆ ಎನ್ನುವಂಥದ್ದನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಬಿ.ಎ. ಮೊಯಿದ್ದೀನ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಾದ್ಯಂತ ಸರ್ಕಾರಿ ಕಾಲೇಜು ಕಟ್ಟಡಗಳಿಗೆ ಕೇವಲ 50ಲಕ್ಷ ರೂಪಾಯಿಗಳು ಮಾತ್ರ ಅನುದಾನ ಇದೆ. ಇದನ್ನು ನಾನು ಹಣಕಾಸು ಇಲಾಖೆಯ ಗಮನಕ್ಕೆ ತಂದಿದ್ದೇನೆ. ಇದರ ಜೊತೆಗೆ ನಿಮ್ಮೆಲ್ಲರ ಬೇಡಿಕೆಯನ್ನು ಪೂರೈಸಲಿಕ್ಕಾಗಿ ಹೆಚ್ಚಿಗೆ ಐದು ಕೋಟಿ ರೂಪಾಯಿಗಳನ್ನು ಕೇಳಿದ್ದೇನೆ. ಮತ್ತು ಶಂಕರನಾರಾಯಣ ಪ್ರಥಮ ದರ್ಜೆ ಕಾಲೇಜಿನ ಕೊಠಡಿಗಾಗಿ 33 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು, ಈ ಒಟ್ಟು ಅಂದಾಜಿನಲ್ಲಿ 10 ಲಕ್ಷ ರೂ.ಗಳನ್ನು ಖರ್ಚು ಮಾಡಿ ಎರಡು ಕೊಠಡಿಗಳನ್ನು ಕಟ್ಟಿಸಿ ಈಗಾಗಲೇ ಕಾಲೇಜಿನ ಪ್ರಿನ್ಸಿಪಾಲರಿಗೆ ಹಸ್ತಾಂತರ ಮಾಡಿದ್ದೇವೆ. ಈ ವರ್ಷದ ಆಯವ್ಯಯದಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇದು ನಿಮ್ಮ ಕಾಲೇಜಿನ ಕೊಠಡಿ ಕಟ್ಟುವುದಕ್ಕೆ ಸಾಕಾಗುವುದಿಲ್ಲ. ಖಂಡಿತವಾಗಿ ಹೆಚ್ಚಿನ ಬೇಡಿಕೆ ಸಲುವಾಗಿ ಎಲ್ಲಾ ಪ್ರಯತ್ನವನ್ನು ಮಾಡುತ್ತೇನೆ ಎನ್ನತಕ್ಕಂಥ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ 10ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅದರಲ್ಲಿ ಎರಡು ಕೊಠಡಿಗಳನ್ನು ಮಾತ್ರ ನಿರ್ಮಿಸಿದ್ದಾರೆ, ಈ ಸಾಲಿನ ಆಯವ್ಯಯದಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದು ಅದರಲ್ಲಿ ಅರ್ಧ ಕೊಠಡಿಯನ್ನು ನಿರ್ಮಿಸುತ್ತಾರೆಯೇ? ಹೆಚ್ಚು ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದು ಅದಕ್ಕೆ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಅವರು ಹೇಳಿದ ಮೇಲೆ ಮಾತಿನಂತೆ ನಡೆದುಕೊಳ್ಳುತ್ತಾರೆ. ಆದರೆ ಎರಡು ಲಕ್ಷ ರೂಪಾಯಿಗಳನ್ನು ಯಾವುದಕ್ಕೆ ಕೊಟ್ಟಿದ್ದಾರೆ ? ಇದರ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಪತ್ರ ಕೊಟ್ಟಿದ್ದೆ. ಅದಕ್ಕೆ ಅವರು ಆದ್ಯತೆ ಮೇರೆಗೆ ಪರಿಗಣಿಸುತ್ತೇವೆಂದು ಬರೆದಿದ್ದಾರೆ. ಆದರೆ ಎರಡು ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಯು.ಆರ್.ಸಭಾಪತಿ : ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಇದೇ ಉತ್ತರವನ್ನು ಕೊಟ್ಟಿದ್ದರು. ಕಳೆದ ಅಧಿವೇಶನಕ್ಕೂ ಈ ಅಧಿವೇಶನಕ್ಕೂ ಸ್ವಲ್ಪವಾದರೂ

ಪ್ರೋಗ್ರೆಸ್ ಸರ್ಕಾರದಿಂದ ಬೇಡವೇ ?

ಶ್ರೀ ಬಿ.ಎ.ಮೊಯಿದ್ದೀನ್ : ಮಾನ್ಯ ಅಧ್ಯಕ್ಷರೆ, ಕುಂದಾಪುರ, ಕಾಪು ಮುಂತಾದ ಕಡೆ ಈಗ ಬಹಳ ಮಳೆ ಸುರಿಯುತ್ತಿರುವುದರಿಂದ ಈಗ ಹಣ ಕೊಟ್ಟರೂ ಅಲ್ಲಿ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಮಳೆ ಕಡಿಮೆ ಆಗುವವರೆಗೆ ಕಾಯಬೇಕಾಗುತ್ತದೆ.

ಶ್ರೀ ವಸಂತ ವಿ.ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಕಾಲೇಜು ಕಟ್ಟಡದ ಬಗ್ಗೆ ನಾನು ಕಳೆದ ಐದು ವರ್ಷದಿಂದ ಪ್ರತಿ ಅಧಿವೇಶನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಪ್ರಥಮ ದರ್ಜೆ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಉನ್ನತ ಶಿಕ್ಷಣ ಸಚಿವರು ಮತ್ತು ಲೋಕೋಪಯೋಗಿ ಇಲಾಖೆಯ ಸಚಿವರು ಕಳೆದ ಐದು ವರ್ಷಗಳ ಹಿಂದೆ ಮಂಜೂರಾತಿಯನ್ನು ಕೊಟ್ಟಿದ್ದರು. ನನ್ನ ಕ್ಷೇತ್ರದ ಪ್ರಥಮ ದರ್ಜೆ ಕಾಲೇಜಿನ ಮಕ್ಕಳು ಈಗ ಬೀದಿಯಲ್ಲಿ ಕುಳಿತುಕೊಂಡಿದ್ದಾರೆ. ಏಕೆಂದರೆ ಮೊದಲು ಬಾಡಿಗೆ ಕಟ್ಟಡದಲ್ಲಿ ಕಾಲೇಜು ನಡೆಯುತ್ತಿದ್ದು ಈಗ ಆ ಕಟ್ಟಡಕ್ಕೆ ಅವರು ಬೀಗ ಹಾಕಿದ್ದಾರೆ. ಕಾಲೇಜು ನಡೆಯುತ್ತಿಲ್ಲ. ಅಲ್ಲಿ ಇಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ಈ ಪ್ರಥಮ ದರ್ಜೆ ಕಾಲೇಜಿಗೆ ಶಿಕ್ಷಣ ಇಲಾಖೆಯಾಗಲಿ, ಲೋಕೋಪಯೋಗಿ ಇಲಾಖೆಯಾಗಲಿ ಒಂದು ಪೈಸೆಯಷ್ಟೂ ಸಹ ನೆರವನ್ನು ನೀಡಲಿಲ್ಲ. ಮಾನ್ಯ ಉನ್ನತ ಶಿಕ್ಷಣ ಸಚಿವರು ಅಲ್ಲಿಗೆ ಬಂದಿದ್ದಾಗ ದೊಡ್ಡ ಮನಸ್ಸು ಮಾಡಿ ಆ ಕಾಲೇಜಿನ ಕಟ್ಟಡದ ಬಗ್ಗೆ ವೀಕ್ಷಣೆ ಮಾಡಿದರು. ವೀಕ್ಷಣೆ ಮಾಡಿದ ಮೇಲೆ ಅವರು ಮಂಗಳೂರಿಗೆ ಹೋಗಿ ನಂತರ ಬೆಂಗಳೂರಿಗೆ ಬಂದರು. ಇದುವರೆಗೆ ಆ ಕಾಲೇಜಿನ ಕಟ್ಟಡಕ್ಕೆ ಒಂದು ಪೈಸೆ ಕೂಡ ಖರ್ಚು ಮಾಡದೆ ಆ ಕಾಲೇಜಿನ ಮಕ್ಕಳು ಬೀದಿಯಲ್ಲಿ ಕುಳಿತುಕೊಂಡಿದ್ದಾರೆ. ಈಗ ಏನು ಮಾಡಬೇಕು ಹೇಳಿ.

ಶ್ರೀ ಬಿ.ಎ. ಮೊಯಿದ್ದೀನ್ : ನಿಮ್ಮ ಕಾಲೇಜಿಗೆ ಸಂಬಂಧಪಟ್ಟ ಹಾಗೆ ಕೆಲಸ ನಡೆಯುತ್ತಿದೆ.

ಶ್ರೀ ವಸಂತ ವಿ.ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಹಣ ಇಲ್ಲದೆ ಕೆಲಸ ನಿಂತಿದೆ. ಒಂದು ಪೈಸೆ ಕೂಡ ಸರ್ಕಾರದಿಂದ ಬಿಡುಗಡೆ ಮಾಡಲಿಲ್ಲ.

ಶ್ರೀ. ಪಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಶ್ರೀ ಪ್ರತಾಪಚಂದ್ರ ಶೆಟ್ಟಿ ಅವರ ಪ್ರಶ್ನೆಗೆ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರೇ ಒಪ್ಪುತ್ತಾರೆ, ಆದರೆ ಶ್ರೀ ವಸಂತ ಸಾಲಿಯಾನ ಅವರ ಕ್ಷೇತ್ರದಲ್ಲಿ ಕೆಲಸ ನಡೆಯುತ್ತಿದೆ ಎಂದು ಹೇಳುತ್ತಾರೆ. ಇದು ಒಂದೇ ಜಿಲ್ಲೆಗೆ ಎರಡು ತರಹದ ಉತ್ತರ. ಇದು ಹೇಗೆ ಆಗುತ್ತದೆ ?

ಶ್ರೀ ವಸಂತ ವಿ.ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಪ್ರಥಮ ದರ್ಜೆ ಕಾಲೇಜು ಕಟ್ಟಡಕ್ಕೆ 1994ನೇ ಇಸವಿಯಲ್ಲಿ 18ಲಕ್ಷ ರೂಪಾಯಿಗಳು ಮಂಜೂರಾತಿ ಆಗಿತ್ತು. ಟೆಂಡರ್ ಮತ್ತು ಶಂಕುಸ್ಥಾಪನೆ ಹೀಗೆ ಎಲ್ಲವೂ ಆಯಿತು. ಈ ಜನತಾ ದಳ ಸರ್ಕಾರ ಅಡಳಿತಕ್ಕೆ ಬಂದ ಮೇಲೆ ಆ ಕಾಲೇಜಿಗೆ ಒಂದು ಪೈಸೆ ಕೂಡ ಮಂಜೂರಾತಿ ಮಾಡಲಿಲ್ಲ. ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ನಾನು ಗಲಾಟೆ ಮಾಡಿದ್ದು ಮಾನ್ಯ ಅಧ್ಯಕ್ಷರಾದ ತಮಗೆ ಗೊತ್ತಿದೆ. ಅದಕ್ಕೆ 12ಲಕ್ಷ ರೂಪಾಯಿಗಳ ಮಂಜೂರಾತಿಯನ್ನು ಕೊಟ್ಟರು, ಆಮೇಲೆ ಕೆಲಸ ಮಾಡುತ್ತೇವೆಂದು ಹೇಳಿದರು, ಕೆಲಸ ಮಾಡಿದರು, ನಂತರ ಹಣ ಕೊಡಲಿಲ್ಲ ಕೆಲಸ ನಿಂತುಹೋಯಿತು. ಇದರಿಂದ ಸುಮಾರು 300ಶಾಲಾ ಕಾಲೇಜು ಮಕ್ಕಳಿಗೆ ತೊಂದರೆಯಾಗಿದೆ.

ಶ್ರೀ ಬಿ.ಎ.ಮೊಯಿದೀನ್ : ಮಾನ್ಯ ಅಧ್ಯಕ್ಷರೆ, ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಕೆಲಸ ಮಾಡಿಸುತ್ತೇವೆ.

ಶ್ರೀ ಯು.ಆರ್.ಸಭಾಪತಿ : ಮಾನ್ಯ ಅಧ್ಯಕ್ಷರೇ ಗಂಭೀರವಾಗಿ ಪರಿಗಣಿಸುತ್ತೇವೆಂದು ಹೇಳಿದರೆ ಏನರ್ಥ ? ಕಳೆದ ಅಧಿವೇಶನದಲ್ಲಿ ಕೂಡ ಗಂಭೀರವಾಗಿ ಪರಿಗಣಿಸುತ್ತೇವೆಂದು ಹೇಳಿದರು. ಈಗ ಗಂಭೀರತೆ ಇಲ್ಲದೆ ಗಂಭೀರ ಎಂದು ಹೇಳುತ್ತಾರೆ. ಸಂಬಂಧಪಟ್ಟ ಸಚಿವರಿಗೆ ಸ್ವಲ್ಪವಾದರೂ ಗಂಭೀರತೆ ಬೇಡವೇ ?

11.50 ಎ.ಎಂ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :

ತಾವು ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಬೇಕು. ಶಿಕ್ಷಣ ಸಂಸ್ಥೆಗಳಿಗೆ ಎಷ್ಟು ಕಟ್ಟಡಗಳನ್ನು ಕೊಡಬೇಕೋ ಅಷ್ಟನ್ನು ಶ್ರೀ ಗೊವಿಂದೇಗೌಡರವರು ಕೊಟ್ಟಿದ್ದಾರೆ. ಇದರ ಬಗ್ಗೆ ಉನ್ನತ ಶಿಕ್ಷಣ ಸಚಿವರು ಏಕೆ ಇಷ್ಟು ನಿರ್ಲಕ್ಷ್ಯ ಮಾಡುತ್ತಿದ್ದಾರೆ ? ಏಕೆಂದರೆ, ವಿದ್ಯಾರ್ಥಿಗಳು ಇವತ್ತು ರಸ್ತೆಗಿಳಿಯುವ ಪರಿಸ್ಥಿತಿ ಇದೆ. ಸ್ಥಳೀಯ ಶಾಸಕರ ಮೇಲೆ ಒತ್ತಡ ಬರುತ್ತದೆ. ನಾವು ಕೇಳುವುದಿಲ್ಲವೆಂಬ ಭಾವನೆ ಬರುತ್ತದೆ. ನೀವು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ, ಎರಡು ಕೊಠಡಿಗಳಿಗೆ ಬೇಕಾದಷ್ಟು ಹಣವನ್ನು ಕೊಡುತ್ತೇವೆಂಬ ಭರವಸೆ ಕೊಟ್ಟರೆ ಒಳ್ಳೆಯದು. ಅದೂ ಸಾಕಾಗುವುದಿಲ್ಲ. ಆದರೂ ಸಹ, ಈ ಮಾತನ್ನು ನಾನು ಕಳಕಳಿಯಿಂದ ತಮ್ಮಲ್ಲಿ ಕೇಳುತ್ತಿದ್ದೇನೆ.

ಶ್ರೀ ಬಿ.ಎ. ಮೊಯಿದೀನ್ : ನೀವು ಚುನಾವಣೆಯನ್ನು ಧೈರ್ಯದಿಂದ ಎದುರಿಸುವ ಹಾಗೆ ಮಾಡೋಣ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ತಾವು ಹಗುರವಾದ ಉತ್ತರವನ್ನು ಹೇಳುವುದು ಬೇಡ. ಇದು ರಾಜ್ಯದ ಸಮಸ್ಯೆ. ನನ್ನ ಕ್ಷೇತ್ರವಾದ ಯಲ್ಲಾಪುರದಲ್ಲಿಯೂ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸುಮಾರು 500ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಿಗೆ ಕಳೆದ 12ವರ್ಷಗಳಿಂದ ಒಂದು ರೂಪಾಯಿ ಬಾಡಿಗೆಯನ್ನೂ ಕೊಟ್ಟಿಲ್ಲ. ಈಗ ಕಾಲೇಜು ಕಟ್ಟಡಕ್ಕೆ ಹಣವೂ ಇಲ್ಲ. ಒಂದು ರೂಪಾಯಿಯ ಗ್ರಾಂಟನ್ನೂ ಕೊಟ್ಟಿಲ್ಲ. ಆ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸುವುದಕ್ಕೆ ಅವಕಾಶ ಕೊಡುತ್ತಿಲ್ಲ. ಇವರು ಈ ರೀತಿ ಹಗುರವಾದ ಉತ್ತರ ಕೊಟ್ಟರೆ, ನಾವು ನಮ್ಮ ಕ್ಷೇತ್ರದ ಜನರಿಗೆ ಈ ರೀತಿ ಸರ್ಕಾರ ಬೇಜವಾಬ್ದಾರಿಯಾಗಿ ಮಾತನಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ಈಗಾಗಲೇ ಈ ಸರ್ಕಾರದ ಬಣ್ಣ ಗೊತ್ತಾಗಿದೆ.

ಹೊನ್ನಾವರದಲ್ಲಿ ರಕ್ತನಿಧಿ ಸ್ಥಾಪಿಸುವ ಬಗ್ಗೆ

227(1673)

ಡಾ ॥ ಎಂ.ಪಿ. ಕರ್ಕಿ (ಕುಮಟ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲಿ ರಕ್ತನಿಧಿ ಸ್ಥಾಪಿಸಲು ಆಯವ್ಯಯದಲ್ಲಿ ಹಣ ನಿಗಧಿ ಪಡಿಸಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?